KASM620023012025

# ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಧಿಕಾರಿಗಳು ಸಾಗರ.

**: ಉಪಸ್ಥಿತರು :**

**ಶ್ರೀ ಮಾದೇಶ ಎಂ.ವಿ., ಬಿ.ಕಾಂ., ಎಲ್.ಎಲ್.ಬಿ.,**

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಧಿಕಾರಿಗಳು – ಸಾಗರ.

ದಿನಾಂಕಃ  10 ನೇ ಡಿಸೆಂಬರ್ 2025

**ಅಸಲು ದಾವಾ ಸಂಖ್ಯೆ 211/2025**

**ವಾದಿ** : ಶ್ರೀಧರ ತಂದೆಃ ಎ.ಕೆ.ಕಲ್ಲಪ್ಪ
ವಯಸ್ಸು ಸುಮಾರು 48 ವರ್ಷ,
ವಾಸಃ  ಭೀಮನಕೋಣೆ ರಸ್ತೆ,
ಕಂಬಳಿಕೊಪ್ಪ ಗ್ರಾಮ, ಕಸಬಾ ಹೋಬಳಿ,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**ವಿರುದ್ಧ**

**ಪ್ರತಿವಾದಿ** : ನಾರಾಯಣರಾವ್ ತಂದೆಃ ರಾಮರಾವ್
ವಯಸ್ಸು ಸುಮಾರು 65 ವರ್ಷ,
ವಾಸಃ ಭೀಮನಕೋಣೆ ರಸ್ತೆ,
ಕಂಬಳಿಕೊಪ್ಪ ಗ್ರಾಮ, ಕಸಬಾ ಹೋಬಳಿ,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**ಮಧ್ಯಂತರ ಅರ್ಜಿ 1ರ  ಪಕ್ಷಗಾರರು**

**ಅರ್ಜಿದಾರರು** : ಶ್ರೀಧರ ತಂದೆಃ ಎ.ಕೆ.ಕಲ್ಲಪ್ಪ

*(ಪರವಾಗಿ ಶ್ರೀ ಆರ್.ಹೆಚ್.ಬಿ.,–.ವಕೀಲರು)*

ವಿರುದ್ಧ

**ಎದುರುದಾರರುಃ** : ನಾರಾಯಣರಾವ್ ತಂದೆಃ ರಾಮರಾವ್

*(ಪರವಾಗಿ,ಶ್ರೀ ಎಸ್.ಕೆ, ವಕೀಲರು).*

| | |
|---|---|
| Provision Under which the application is filed | Order 39 Rule 1 and 2 and R/w Sec.151 of CPC |
| Relief sought for | Temporary injunction order against the defendants, restraining him setting up vehicle water service unit by installing machineries in the residential area till disposal of the suit. |
| The date on which the application is filed. | 11-09-2025 |
| Number of the application. | IA No.1 |
| The date on which the objection is filed by defendant / opponent. | 31-10-2025 |
| The date on which the orders were passed on the said application. | 10-12-2025 |

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ 151 ರ ಅಡಿಯಲ್ಲಿ ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶ**

1. ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ಧ ಸಲ್ಲಿಸಿದ್ದು, ಶಾಶ್ವತ ಪ್ರತಿಬಂಧಕಾಜ್ಞೆ ಪರಿಹಾರವನ್ನು ಕೋರಿರುತ್ತಾರೆ. ಸದರಿ ದಾವೆಯಲ್ಲಿ ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ1 ನ್ನು ಸಲ್ಲಿಸಿ, ಈ ದಾವೆಯು ಅಂತಿಮವಾಗಿ ನಿರ್ಣಯವಾಗುವವರೆಗೆ ಪ್ರತಿವಾದಿಯರಾಗಲೀ, ಅವರ ಪರವಾಗಿ ಕಾರ್ಯ ನಿರ್ವಹಿಸುವ ಅಥವಾ ಅಧಿಕಾರ ಪಡೆದಿರುವ ಎಲ್ಲಾ ವ್ಯಕ್ತಿಗಳು, ಆಶ್ರಯ ನಿವೇಶನದಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ, ಅಲ್ಲಿ ವಾಟರ್ ವಾಷ್ ಮಳಿಗೆಯನ್ನು ತೆರೆದು, ಭಾರೀ ಯಂತ್ರಗಳನ್ನು ಅಳವಡಿಸದಂತೆ ಹಾಗೂ ಸದರಿ ಆಶ್ರಯ ನಿವೇಶನಗಳ ಮನೆಗಳು ಇರುವ ಜಾಗದಲ್ಲಿ ಯಂತ್ರಗಳನ್ನು ಅಳವಡಿಸಿ ಇದರಲ್ಲಿ ಆಗುವಂತಹ ಶಬ್ಧಮಾಲಿನ್ಯ ಮತ್ತು ಪರಿಸರ ಮಾಲಿನ್ಯದಿಂದ ಅಕ್ಕಪಕ್ಕದಲ್ಲಿರುವ ಮನೆಗಳಿಗೆ ಮತ್ತು ವಾದಿಗೆ ತೊಂದರೆಯುಂಟು ಮಾಡದಂತೆ ಎದುರುದಾರರ ವಿರುದ್ಧ ತಾತ್ಕಾಲಿಕವಾಗಿ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡುವಂತೆ ಕೋರಿರುತ್ತಾರೆ.

2. ಸಾಗರ ತಾಲ್ಲೂಕು, ಕಂಬಳಿಕೊಪ್ಪ ಗ್ರಾಮದ ಸರ್ವೇ ನಂ.49 ರಲ್ಲಿ 6 ನೇ ನಂಬರಿನ ನಿವೇಶನ ರಾಮನಗರ ನಗರಸಭೆ ವಾರ್ಡ ನಂ.15/5 ಚಾಲ್ತಿ ಸಾಲಿನ ಖಾತೆ ಅಸೆಸ್ ಮೆಂಟ್ ನಂ.466-466 ರಲ್ಲಿರುವ 30X 40 ಅಡಿ ವಿಸ್ತೀರ್ಣದ ಖಾಲಿ ಜಾಗ ಇದಕ್ಕೆ ಚೆಕ್ಕುಬಂಧಿಃ

| | |
|---|---|
| ಪೂರ್ವಕ್ಕೆ | : ಸಾಗರ ಭೀಮನಕೋಣೆ ರಸ್ತೆ |
| ಪಶ್ಚಿಮಕ್ಕೆ | : ಸಂ.ನಂ.49 ರ ಉಳಿಕೆ ಪ್ರದೇಶ |
| ಉತ್ತರಕ್ಕೆ | : ನಿವೇಶನ ನಂ.5 |
| ದಕ್ಷಿಣಕ್ಕೆ | : ನಿವೇಶನ ನಂ.7 |

ಈ ಮೇಲ್ಕಂಡ ಸ್ವತ್ತು ಈ ದಾವೆಯ ವಸ್ತು ವಿಷಯವಾಗಿದ್ದು, ಇನ್ನು ಮುಂದೆ ದಾವಾ ಸ್ವತ್ತು ಎಂದು ಸಂಭೋಧಿಸಲಾಗುವುದು.

3. ವಾದಿಯು ತನ್ನ ಮಧ್ಯಂತರ ಅರ್ಜಿ ಸಂಖ್ಯೆ.1 ರೊಂದಿಗೆ ಹಾಜರುಪಡಿಸಿರುವ ಪ್ರಮಾಣ ಪತ್ರವನ್ನು ಪ್ರಮಾಣಪೂರ್ವಕವಾಗಿ ಹೇಳುವುದೇನೆಂದರೆ, ದಾವಾ ಸ್ವತ್ತನ್ನು ವಾದಿಯ ಅಣ್ಣ ನಾಗರಾಜರವರಿಂದ ದಿನಾಂಕ 13-07-2012 ರಂದು ದಾನಪತ್ರದ ಮೂಲಕ ಪಡೆದಿದ್ದು, ಆ ಮೂಲಕ ತಾನು ದಾವಾ ಸ್ವತ್ತಿನ ಮಾಲೀಕನಾಗಿ ತನ್ನ ಹೆಸರಿಗೆ ದಾವಾ ಸ್ವತ್ತಿನ ಖಾತೆ ಹಾಗೂ ಇತರೆ ಎಲ್ಲಾ ಕಂದಾಯ ದಾಖಲೆಗಳನ್ನು ಬದಲಾವಣೆ ಮಾಡಿಕೊಂಡು ಸದರಿ ಸ್ವತ್ತಿನ ಮಾಲೀಕನಾಗಿ ಸ್ವಾಧೀನಾನುಭವದಲ್ಲಿ ಇದ್ದೇನೆ. ಅದರಲ್ಲಿ ವಾಸದ ಉದ್ದೇಶಕ್ಕಾಗಿ 30X 40 ಅಡಿ ವಿಸ್ತೀರ್ಣದ ಜಾಗವನ್ನು ವಾಸದ ಉದ್ದೇಶಕ್ಕಾಗಿಯೇ ಮಂಜೂರು ಮಾಡಿದ್ದು, ಅದನ್ನು ಇತರೆ ವಾಣಿಜ್ಯ ಉದ್ದೇಶಕ್ಕೆ ಬಳಸತಕ್ಕದ್ದಲ್ಲ. ಸದರಿ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಕೊಳ್ಳಬೇಕು ಎಂದು ತೀರ್ಮಾನಿಸಿದಾಗ ಪ್ರತಿವಾದಿಯು ನಿವೇಶನ ಸಂಖ್ಯೆ-5 ಅಂದರೆ ದಾವಾ ಸ್ವತ್ತಿನ ಪಕ್ಕದ ಸ್ವತ್ತಾದ ಆಶ್ರಯ ಬಡಾವಣೆಯಲ್ಲಿ ಮಂಜೂರಾಗಿರುವಂತಹ ನಿವೇಶನದಲ್ಲಿ ವಾಹನಗಳನ್ನು ತೊಳೆಯು ಘಟಕವನ್ನು ಪ್ರಾರಂಭ ಮಾಡಲು ಹೊರಟಿದ್ದು, ಇದರಿಂದ ತನಗೆ ಹಾಗೂ ಸದರಿ ಬಡಾವಣೆಯಲ್ಲಿ ವಾಸಿಸುವ ಜನರಿಗೆ ತೊಂದರೆಯಾಗುತ್ತಿರುತ್ತದೆ. ಇದರಿಂದ ವಾದಿಯು ದಾವಾ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಕೊಳ್ಳಲು ಆಗುತ್ತಿಲ್ಲ. ಈ ಪ್ರತಿವಾದಿಯು ಸದರಿ ಸ್ವತ್ತಿನಲ್ಲಿ ವಾಟರ್ ಸರ್ವೀಸ್ ಸ್ಟೇಷನ್ ಅನ್ನು ಪ್ರಾರಂಭಿಸಲು ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲ. ಒಂದು ವೇಳೆ ಅಲ್ಲಿ ವಾಟರ್ ಸರ್ವೀಸ್ ಸ್ಟೇಷನ್ ಅನ್ನು ಪ್ರಾರಂಭಿಸಿದರೆ ವಾದಿಗೆ ಹಾಗೂ ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆ ಉಂಟಾಗುವ ಸಾಧ್ಯತೆ ಇರುತ್ತದೆ. ಅದು ಅಲ್ಲದೇ ಸದರಿ ಜಾಗದಲ್ಲಿ ವಾಟರ್ ಸರ್ವೀಸ್ ಸ್ಟೇಷನ್ ಪ್ರಾರಂಭ ಮಾಡಲು ಅಕ್ಕಪಕ್ಕದ ನಿವಾಸಿಗಳ ಅನುಮತಿಯನ್ನು ಸಹ ಪ್ರತಿವಾದಿಯು

ಪಡೆದುಕೊಂಡಿರುವುದಿಲ್ಲ. ದಿನಾಂಕ 25-08-2025 ರಂದು ಈ ಕುರಿತು ಕ್ರಮ ಕೈಗೊಳ್ಳುವಂತೆ ಸಾಗರದ ನಗರಸಭೆ ಆಯುಕ್ತರಿಗೆ ತಕರಾರು ಅರ್ಜಿಯನ್ನು ನೀಡಿದ್ದರೂ ಸಹ, ಯಾವುದೇ ಪ್ರಯೋಜನವಾಗಿರುವುದಿಲ್ಲ. ಸದರಿ ಪ್ರತಿವಾದಿಯು ಆಶ್ರಯ ನಿವೇಶನಗಳ ಮನೆಗಳು ಇರುವ ಜಾಗದಲ್ಲಿ ಯಂತ್ರಗಳನ್ನು ಅಳವಡಿಸಿದರೆ ಶಬ್ದ ಮಾಲಿನ್ಯ ಮತ್ತು ಪರಿಸರ ಮಾಲಿನ್ಯ ಆಗುವ ಸಾಧ್ಯತೆ ಇರುತ್ತದೆ. ಈ ಕುರಿತು ಪ್ರಶ್ನಿಸಿದಾಗ, ಪ್ರತಿವಾದಿಯು ಜನಬಲ, ಹಣಬಲ ಹಾಗೂ ರಾಜಕೀಯ ಬಲದಿಂದ ದುಂಡಾವರ್ತಿಯಾಗಿ ವರ್ತಿಸುತ್ತಿದ್ದು, ನ್ಯಾಯಾಲಯದ ಸೂಕ್ತ ಆದೇಶವಿಲ್ಲದೇ ಸದರಿ ಪ್ರತಿವಾದಿಯ ಕಾನೂನುಬಾಹಿರ ಕೃತ್ಯವನ್ನು ತಡೆಯುವುದು ಅಸಾಧ್ಯ. ಒಂದು ವೇಳೆ ತಮ್ಮ ಅರ್ಜಿಯನ್ನು ಪುರಸ್ಕರಿಸದೇ ಇದ್ದಲ್ಲಿ, ವಾದಿಗೆ ಮತ್ತು ಅಕ್ಕಪಕ್ಕದಲ್ಲಿ ನಿವಾಸಿಗಳಿಗೆ ತುಂಬಲಾರದ ನಷ್ಟ ಮತ್ತು ಹಾನಿ ಉಂಟಾಗುತ್ತದೆ. ಆದ ಕಾರಣ, ತಮ್ಮ ಪರವಾಗಿ ಮೇಲ್ನೋಟದ ದಾವೆ ಹಾಗೂ ಅನುಕೂಲತೆಯ ಒಲವು ಇರುವುದರಿಂದ, ತಮ್ಮ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ಪ್ರತಿವಾದಿಯ ವಿರುದ್ಧ ತಾತ್ಕಲಿಕ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡುವಂತೆ ಕೋರಿರುತ್ತಾರ.

4. ಪ್ರತಿವಾದಿಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾದ ನಂತರ, ಪ್ರತಿವಾದಿಯು ತನ್ನ ವಕೀಲರ ಮುಖಾಂತರ ನ್ಯಾಯಾಲಯದ ಮುಂದೆ ಹಾಜರಾಗಿ, ಸದರಿ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ1 ಕ್ಕೆ ತನ್ನ ವಿವರವಾದ ತಕರಾರನ್ನು ಸಲ್ಲಿಸಿರುತ್ತಾರೆ. ಸದರಿ ತಕರಾರಿನಲ್ಲಿ ಪ್ರತಿವಾದಿಯು, ಹೇಳುವುದೇನೆಂದರೆ, ವಾದಿಯು ನ್ಯಾಯಾಲಯಕ್ಕೆ ಶುದ್ಧ ಹಸ್ತದಿಂದ ಬಂದಿರುವುದಿಲ್ಲ ಹಾಗೂ ಸೂಕ್ತ ಪ್ರಾಧಿಕಾರದ ಮುಂದೆ ತನ್ನ ಅಹವಾಲನ್ನು ಮಂಡಿಸುವ ಯಾವುದೇ ಪ್ರಯತ್ನ ಮಾಡದೇ ಸಲ್ಲಿಸಿರುವ ಈ ದಾವೆಯು ಊರ್ಜಿತವಾಗತಕ್ಕದ್ದಲ್ಲ ಹಾಗೂ ವಾದಿಯು ವಾಸ್ತವ ಸಂಗತಿಗಳನ್ನು ಮರೆಮಾಚಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಈ ಪ್ರತಿವಾದಿಯು ಸುಮಾರು

ರೂ.8,00,000/-ಗಳ ಬಂಡವಾಳವನ್ನು ಹೂಡಿ ತನ್ನ ಮೊಮ್ಮಗನ ಹೆಸರಿನಲ್ಲಿ ತನ್ನ ಮೊಮ್ಮಗನಿಗೆ ಉದ್ಯೋಗ ಕಲ್ಪಿಸುವ ಹಿತದೃಷ್ಟಿಯಿಂದ ವಾಹನಗಳ ಸರ್ವೀಸ್ ಸ್ಟೇಷನ್ ಅನ್ನು ಸ್ಥಾಪಿಸಿದ್ದು, ಸ್ಥಳೀಯ ಪ್ರಾಧಿಕಾರಕ್ಕೆ ಅಗತ್ಯ ಪರವಾನಿಗೆಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಒಂದು ವೇಳೆ ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗೆ ತುಂಬಲಾರದ ಹಾನಿ ಮತ್ತು ನಷ್ಟ ಉಂಟಾಗುತ್ತದೆ. ಅದನ್ನು ಯಾವುದೇ ರೀತಿಯಿಂದಲೂ ಸಹ ತುಂಬಿಕೊಡಲು ಸಾಧ್ಯವಾಗುವುದಿಲ್ಲ. ಈ ಪ್ರತಿವಾದಿಯು ಕಾರುಗಳ ಸರ್ವೀಸ್ ಸ್ಟೇಷನ್ ಅನ್ನು ಸ್ಥಾಪಿಸಿ ಆ ಮೂಲಕ ತನ್ನ ಮೊಮ್ಮಗನಿಗೆ ಜೀವನಕ್ಕೆ ಅನುಕೂಲವಾಗಲೀ ಎಂಬ ದೃಷ್ಟಿಯಿಂದ ತನ್ನ ಮೊಮ್ಮಗನಿಗೆ ಸೌಲಭ್ಯ ಕಲ್ಪಿಸುವ ಸಲುವಾಗಿ ಸದರಿ ಸರ್ವೀಸ್ ಸ್ಟೇಷನ್ ಅನ್ನು ಸ್ಥಾಪಿಸಲು ಹೊರಟಿರುತ್ತಾರೆ. ಅಲ್ಲದೇ ಸದರಿ ಪ್ರತಿವಾದಿಯು ಕಾರ್ ವಾಷಿಂಗ್ ಸರ್ವೀಸ್ ಸ್ಟೇಷನ್ ಅನ್ನು ಸ್ಥಾಪಿಸಲು ಹೊರಟಿರುವ ಅಕ್ಕಪಕ್ಕದಲ್ಲಿ ಪ್ರಭು ಪ್ರಸಾದ್ ಎಂಬುವವರು ಬೃಂದಾವನ ಸರ್ವೀಸ್ ಸೆಂಟರ್ ಎಂಬ ಹೆಸರಿನಲ್ಲಿ ಈಗಾಗಲೇ ಒಂದು ಸರ್ವೀಸ್ ಸ್ಟೇಷನ್ ಅನ್ನು ನಡೆಸುತ್ತಿದ್ದು ಅವರ ಚಿತಾವಣೆ ಮೇರೆಗೆ ವಾದಿಯು ಸುಳ್ಳು ಆರೋಪಗಳನ್ನು ಮಾಡಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಸದರಿ ವಾದಿಯು ತಂದಿರುವ ದಾವೆಯಲ್ಲಿ ಮೇಲ್ನೋಟಕ್ಕೆ ಪರಿಗಣಿಸಬಹುದಾದ ಯಾವುದೇ ಅಂಶವಿರುವುದಿಲ್ಲ. ಆದಕಾರಣ, ವೆಚ್ಚಗಳ ಸಹಿತ ಪ್ರಸ್ತುತ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರತಿವಾದಿಯು ಕೋರಿರುತ್ತಾರೆ.

5. ಉಭಯ ಪಕ್ಷಗಾರರ ವಕೀಲರು ಮಂಡಿಸಿರುವ ವಾದವನ್ನು ಆಲಿಸಿದೆ, ಮತ್ತು ಪಕ್ಷಗಾರರು ನ್ಯಾಯಾಲಯಕ್ಕೆ ಸಲ್ಲಿಸಿರುವ ಈ ದಾವೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

6. **ಈ ಸಂದರ್ಭದಲ್ಲಿ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.**

ಅಂಶ –1 ವಾದಿಯು ತಮ್ಮ ಪರವಾಗಿ ಮೇಲ್ನೋಟದ ದಾವೆ ಇದೆ ಎಂದು ಸಾಭೀತುಪಡಿಸುವರೇ ?

ಅಂಶ –2 ಅನುಕೂಲತೆಯ ಒಲವು ವಾದಿಯ ಪರವಾಗಿದೆಯೇ?

ಅಂಶ –3 ವಾದಿಗೆ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸದಿದ್ದರೆ, ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಉಂಟಾಗುತ್ತದೆಯೇ?

ಅಂಶ –4 ಯಾವ ಆದೇಶ?

7. ಮೇಲಿನ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ.

**ಅಂಶಃ 1 ನಕಾರಾತ್ಮಕವಾಗಿ,**

**ಅಂಶಃ 2 ನಕಾರಾತ್ಮಕವಾಗಿ,**

**ಅಂಶಃ 3 ನಕಾರಾತ್ಮಕವಾಗಿ,**

**ಅಂಶಃ 4** ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆಃ–

## :ಕಾರಣಗಳು:

8. **ಅಂಶಃ 1 ರಿಂದ 3** ಮೇಲಿನ ಅಂಶ–1 ರಿಂದ 3 ಒಂದಕ್ಕೊಂದು ಅಂತರ ಸಂಬಂಧ ಹೊಂದಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸಲು, ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ವಾದಿಯು ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಪ್ರತಿವಾದಿಯು ತನ್ನ ನಿವೇಶನದಲ್ಲಿ ಕಾರ್ ವಾಷಿಂಗ್ ಸರ್ವೀಸ್ ಸ್ಟೇಷನ್ ಅನ್ನು ತೆರೆಯದಂತೆ, ಕೋರಿ ಸಲ್ಲಿಸಿರುತ್ತಾರೆ.

ಮಾನ್ಯ ವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ವಾದಿಯು ದಾವಾ ಸ್ವತ್ತನ್ನು ತನ್ನ ಸಹೋದರನಿಂದ ದಾನಪತ್ರದ ಮೂಲಕ ಅರ್ಜಿಸಿದ್ದು, ಆ ಮೂಲಕ ತಾನು ಸದರಿ ಸ್ವತ್ತಿನ ಮಾಲೀಕನಾಗಿ ತನ್ನ ಹೆಸರಿಗೆ ಕಂದಾಯ ದಾಖಲೆಗಳನ್ನು ಬದಲಾವಣೆ ಮಾಡಿಕೊಂಡು ಸ್ವಾಧೀನಾನುಭದಲ್ಲಿರುತ್ತಾನೆ. ಸದರಿ ನಿವೇಶನದ ಪಕ್ಕದಲ್ಲಿ ನಿವೇಶನ ಸಂಖ್ಯೆ-5 ರಲ್ಲಿ ಪ್ರತಿವಾದಿಯು ಕಾರ್ ವಾಟರ್ ಸರ್ವೀಸ್ ಸ್ಟೇಷನ್ ಅನ್ನು ಯಾವುದೇ ಪರವಾನಿಗೆಯನ್ನು ಪಡೆಯದೇ ತೆಗೆಯಲು ಹೊರಟಿದ್ದು, ಆ ಜಾಗವು ಕೇವಲ ವಾಸದ ಉದ್ದೇಶಕ್ಕಾಗಿ ಮಾತ್ರ ಸೀಮಿತವಾಗಿರುವುದರಿಂದ, ಸದರಿ ಸ್ಥಳದಲ್ಲಿ ಯಂತ್ರೋಪಕರಣಗಳನ್ನು ಅಳವಡಿಸಿದರೆ ಶಬ್ದಮಾಲಿನ್ಯ ವಾಯುಮಾಲಿನ್ಯ ಮತ್ತು ಪರಿಸರ ಮಾಲಿನ್ಯ ವಾಗುವುದರಿಂದ ಜನರಿಗೆ ಹಾಗೂ ವಾದಿಗೆ ಕಿರಿಕಿರಿ ಉಂಟಾಗುತ್ತದೆ. ಈ ಕುರಿತು ಅಗತ್ಯ ಕ್ರಮ ಕೋರಿ ಮತ್ತು ಪರವಾನಿಗೆ ನೀಡದಂತೆ ಸಾಗರದ ನಗರಸಭೆಗೆ ವಾದಿಯು ಅರ್ಜಿಯನ್ನು ಕೊಟ್ಟಿದ್ದರೂ ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದಕಾರಣ, ಈ ಹಂತದಲ್ಲಿ ಪ್ರತಿವಾದಿಯ ಸದರಿ ಕಾನೂನು ಬಾಹಿರ ಕೃತ್ಯವನ್ನು ತಡೆಗಟ್ಟದೇ ಹೋದಲ್ಲಿ ವಾದಿಗೆ ತುಂಬಲಾರದ ನಷ್ಟ ಮತ್ತು ಹಾನಿ ಉಂಟಾಗುತ್ತದೆ ಹಾಗೂ ಮೇಲ್ನೋಟದ ದಾವೆ ತನ್ನ ಪರವಾಗಿದ್ದು, ಅನುಕೂಲತೆ ಒಲವು ಸಹ ತನ್ನ ಪರವಾಗಿ ಇದೆ ಎಂಬುದಾಗಿ ಸಾಧನೆ ಮಾಡಿರುತ್ತಾರೆ.

10. ಮಾನ್ಯ ಪ್ರತಿವಾದಿ ಪರ ವಕೀಲರು ತಮ್ಮ ವಾದ ಮಂಡನೆ ಮಾಡುತ್ತಾ, ವಾದಿಯು ತನ್ನ ವಾದಪತ್ರದಲ್ಲಿ ಹೇಳಿದಂತೆ, ಈ ಪ್ರತಿವಾದಿಯು ಯಾವುದೇ ಕಾನೂನು ಬಾಹಿರ ಕೃತ್ಯ ಮಾಡುತ್ತಿಲ್ಲ. ಬದಲಾಗಿ ತಾನು ಕಷ್ಟಪಟ್ಟು ಗಳಿಸಿದ ಸುಮಾರು 8,00,000/- ರೂ.ಗಳನ್ನು ವಿನಿಯೋಗಿಸಿ ತನ್ನ ಮೊಮ್ಮಗನಾದ ಹರ್ಷಿತ್ ರಾವ್ ರವರ ಜೀವನೋಪಾಯಕ್ಕೆ ವ್ಯವಸ್ಥೆ ಮಾಡುವ ಸಲುವಾಗಿ ಕಾರ್ ವಾಷಿಂಗ್ ಸರ್ವೀಸ್ ಸ್ಟೇಷನ್ ಅನ್ನು ಸ್ಥಾಪಿಸಲು ಹೊರಟಿದ್ದು, ಈಗಾಗಲೇ

ಪ್ರತಿವಾದಿಯು ಕಾರ್ಯವನ್ನು ಪ್ರಾರಂಭಿಸಿದ್ದು, ಸ್ಥಳೀಯ ಪ್ರಾಧಿಕಾರಕ್ಕೆ ಪರವಾನಿಗೆಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅಲ್ಲದೇ ಸದರಿ ಸರ್ವೀಸ್ ಸ್ಟೇಷನ್ ನ ಪಕ್ಕದಲ್ಲಿ ಹಲವಾರು ವರ್ಷಗಳ ಹಿಂದೆಯೇ ಪ್ರಭು ಪ್ರಸಾದ್ ಎನ್ನುವವರು ಬೃಂದಾವನ ವಾಟರ್ ಸರ್ವೀಸ್ ಸ್ಟೇಷನ್ ಹೆಸರಿನಲ್ಲಿ ಸರ್ವೀಸ್ ಸ್ಟೇಷನ್ ಅನ್ನು ನಡೆಸುತ್ತಿದ್ದು, ಅವರ ಚಿತಾವಣೆ ಮೇರೆಗೆ , ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಅಲ್ಲದೇ ಸದರಿ ವಾದಿಯು ಸಲ್ಲಿಸಿದ ದಾವೆಯು ಪ್ರಾತಿನಿಧಿಕ ಸ್ವರೂಪದ ದಾವೆಯಾಗಿರುವುದರಿಂದ, ಅದಕ್ಕೆ ಕನಿಷ್ಟ ಇಬ್ಬರು ಅಥವಾ ಮೂರು ಜನರ ಅಗತ್ಯವಿದ್ದು, ವಾದಿಯೊಬ್ಬನೇ ಈ ದಾವೆಯನ್ನು ಸಲ್ಲಿಸಿದ್ದು, ತಾನು ದಾವೆ ಸಲ್ಲಿಸುವ ಪೂರ್ವದಲ್ಲಿ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ತನ್ನ ಅಹವಾಲನ್ನು ಮಂಡಿಸಿರುವುದಿಲ್ಲ. ಅಲ್ಲದೇ ನಿರ್ದಿಷ್ಟ ಪರಿಹಾರಗಳ ಕಾಯ್ದೆ ಯ ಕಲಂ 41(ಹೆಚ್)ನ ಅಡಿಯಲ್ಲಿ ವಾದಿಯು ತಂದಿರುವ ಈ ದಾವೆಯಲ್ಲಿ ಕೋರಿದಂತೆ ಯಾವುದೇ ಪರಿಹಾರಕ್ಕೆ ವಾದಿಯು ಅರ್ಹನಾಗಿರುವುದಿಲ್ಲ. ಅಲ್ಲದೇ ಸದರಿ ವಾದಿಯ ಪರವಾಗಿ ಮೇಲ್ನೋಟದ ದಾವೆ ಇರುವುದಿಲ್ಲ ಮತ್ತು ಅನುಕೂಲತೆಯ ಒಲವು ಸಹ ಇರುವುದಿಲ್ಲ. ಒಂದು ವೇಳೆ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಿದರೇ ಈ ಪ್ರತಿವಾದಿಯು ಈಗಾಗಲೇ ಅಪಾರ ಹಣವನ್ನು ವಿನಿಯೋಗಿಸಿ ಸ್ಥಾಪಿಸಿರುವ ಸದರಿ ವಾಟರಿ ಸರ್ವೀಸ್ ಸ್ಟೇಷನ್ ನ ಕಾರ್ಯವು ನಿಂತು ಹೋಗುವುದಲ್ಲದೇ ಅದರಿಂದ ಪ್ರತಿವಾದಿಗೆ ತುಂಬಲಾರದ ಹಾನಿ ಮತ್ತು ನಷ್ಟ ಉಂಟಾಗುತ್ತದೆ. ಆದಕಾರಣ ಸದರಿ ಅರ್ಜಿಯನ್ನು ವೆಚ್ಚಗಳ ಸಹಿತ ವಜಾಗೊಳಿಸಬೇಕೆಂದು ಕೊರಿರುತ್ತಾರೆ.

11. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಅಡಿಯನ್ನು ವಿಲೆ ಮಾಡುವಾಗ, ನ್ಯಾಯಾಲಯಕ್ಕೆ ಸದರಿ ಅರ್ಜಿಯನ್ನು ಸಲ್ಲಿಸಿದಂತಹ ಪಕ್ಷಗಾರನು ತನ್ನ ಪರವಾಗಿ ಮೇಲ್ನೋಟದ ದಾವೆ ಇದೆ ಎನ್ನುವುದನ್ನು ಹಾಗೂ ಅನುಕೂಲತೆಯ ಒಲವು ತನ್ನ ಪರ ಇದೆ ಮತ್ತು ಒಂದುವೇಳೆ ಅರ್ಜಿಯಲ್ಲಿ ಕೋರಿದಂತೆ ಪ್ರತಿಬಂಧಕಾಜ್ಞೆಯನ್ನು ನೀಡದೇ ಇದ್ದ ಪಕ್ಷದಲ್ಲಿ ತನಗೆ ಪ್ರತಿವಾದಿಗಿಂತ

ಹೆಚ್ಚು ನಷ್ಟ ಮತ್ತು ಹಾನಿ ಉಂಟಾಗುತ್ತದೆ ಎಂಬುದನ್ನು ಸದರಿ ಅರ್ಜಿಯನ್ನು ಸಲ್ಲಿಸಿದಂತಹ ವ್ಯಕ್ತಿಯು ಮೇಲ್ನೋಟಕ್ಕೆ ಸಾಭೀತುಪಡಿಸುವ ಹೊಣೆಗಾರಿಕೆಯನ್ನು ಹೊಂದಿದ್ದಾನೆ. ಮೇಲ್ನೋಟದ ದಾವೆ ಎಂದರೆ, ವಾದಿಯು ತನಗೆ ಒಂದು ವಸ್ತುವಿಷಯದ ಬಗ್ಗೆ ತನಗೆ ಇದೆ ಎಂದು ಹೇಳಲಾದ ಹಕ್ಕಿನ ಬಗ್ಗೆ ವಿಚಾರಣೆಯಾಗಬಹುದಾದ ಪ್ರಕರಣ. ಅಂದರೆ, ಮೇಲ್ನೋಟಕ್ಕೆ ದಾವೆಯನ್ನು ವಿಚಾರಣೆ ಮಾಡಬಹುದು ಎಂದು ನ್ಯಾಯಾಲಯಕ್ಕೆ ಮೊದಲನೇಯದಾಗಿ ಕಂಡುಬರಬೇಕಾಗುತ್ತದೆ. ಕೇವಲ ಮೇಲ್ನೋಟದ ದಾವೆ ತನ್ನ ಪರವಾಗಿ ಇದೆ ಎಂದ ಮಾತ್ರಕ್ಕೆ ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆ ಪರಿಹಾರಕ್ಕೆ ಅರ್ಹನಾಗುವುದಿಲ್ಲ. ಅದನ್ನು ಹೊರತುಪಡಿಸಿ ವಾದಿಯು ತನ್ನ ಪರವಾಗಿ ಅನುಕೂಲತೆಯ ಒಲವು ಅಂದರೆ ಒಂದುವೇಳೆ ಅರ್ಜಿಯನ್ನು ಪುರಸ್ಕರಿಸದೇ ಇದ್ದರೆ ಪ್ರತಿವಾದಿಗೆ ಹೋಲಿಸಿದಲ್ಲಿ ತನಗೆ ಹೆಚ್ಚಿನ ಅನಾನುಕೂಲತೆ ಉಂಟಾಗುತ್ತದೆ ಎಂದು ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡಬೇಕಾಗುತ್ತದೆ. ಅದೇರೀತಿಯಾಗಿ, ತನ್ನ ಪರವಾಗಿ ತಾತ್ಕಾಲಿಕ ನಿರ್ಬಂದಕಾಜ್ಞೆ ನೀಡದೇ ಇದ್ದ ಪಕ್ಷದಲ್ಲಿ ತನಗೆ ಪ್ರತಿವಾದಿಗಿಂತ ಹೆಚ್ಚು ಹಾನಿ ಮತ್ತು ನಷ್ಟ ಉಂಟಾಗುತ್ತದೆ ಹಾಗೂ ಸದರಿ ನಷ್ಟವನ್ನು ಯಾವುದರಿಂದಲೂ ಭರಿಸಲು ಸಾಧ್ಯವಿಲ್ಲ ಎಂಬುದನ್ನು ಸಾಭೀತುಪಡಿಸಬೇಕಾಗುತ್ತದೆ. ಸದರಿ ಮೂರೂ ಅಂಶಗಳನ್ನು ವಾದಿಯು ಸಾಭೀತುಪಡಿಸಿದರೂ ಸಹ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶ ನೀಡುವುದು ನ್ಯಾಯಾಲಯದ ವಿವೇಚನೆಗೆ ಬಿಟ್ಟ ವಿಚಾರವಾಗಿರುತ್ತದೆ. ಒಂದುವೇಳೆ ವಾದಿಯು ವಾಸ್ತವ ಸಂಗತಿಗಳನ್ನು ಮಾರೆಮಾಚಿ ಶುದ್ಧ ಹಸ್ತದಿಂದ ನ್ಯಾಯಾಲಯಕ್ಕೆ ಬಂದಿಲ್ಲ ಎಂದು ಕಂಡುಬಂದರೆ, ಆಗಲೂ ಸಹ ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆಗೆ ಅರ್ಹನಾಗಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಅರ್ಜಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.

12. ವಾದಿಯು ತನ್ನ ದಾವೆಗೆ ಪೂರಕವಾಗಿ ದಿನಾಂಕ 13-07-2012 ರ ದಾನಪತ್ರವನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯಂತೆ ಕಂಬಳಿಕೊಪ್ಪ ಗ್ರಾಮದ ಸ,ನಂ.49 ರ ಸ್ವತ್ತಿನಲ್ಲಿರುವ ಸ್ವತ್ತಿನ ಸಂಖ್ಯೆ -6 ಕ್ಷೇತ್ರ 30 X 40 ಅಡಿ

ಜಾಗವು ವಾದಿಗೆ ತನ್ನ ಸಹೋದರನಾದ ಶ್ರೀ ನಾಗರಾಜ ಬಿನ್ ಕಲ್ಲಪ್ಪ ರವರಿಂದ ದಾನಪತ್ರದ ಮೂಲಕ ಬಂದಿರುತ್ತದೆ. ನಂತರ ಸದರಿ ಸ್ವತ್ತು ವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿದ್ದು, ಅದಕ್ಕೆ ಸಂಬಂಧಪಟ್ಟ ತೆರಿಗೆಯನ್ನು ಕಾಲಕಾಲಕ್ಕೆ ಪಾವತಿಸುತ್ತಾ ಬಂದಿರುತ್ತಾರೆ. ಸದರಿ ದಾವಾ ಆಸ್ತಿಯು ಮೂಲತಃ ಆಶ್ರಯ ಯೋಜನೆ ಅಡಿಯಲ್ಲಿ ವಾದಿಯ ಸಹೋದರನಾದ ನಾಗರಾಜ ಬಿನ್ ಕಲ್ಲಪ್ಪರವರಿಗೆ ದಿನಾಂಕ 30-04-1992 ರಂದು ಮಂಜೂರು ಆಗಿರುತ್ತದೆ. ಈ ಕುರಿತಂತೆ ವಾದಿಯು ಮಂಜೂರಾತಿಗೆ ಸಂಬಂಧಪಟ್ಟ ಸಭೆಯ ನಡವಳಿಕೆಯನ್ನು ಸಹ ಹಾಜರುಪಡಿಸಿರುತ್ತಾರೆ ಮತ್ತು ನಕ್ಷೆಯನ್ನು ಸಹ ಹಾಜರುಪಡಿಸಿದ್ದು, ವಾದಿ ಮತ್ತು ಪ್ರತಿವಾದಿಯರ ನಡುವೆ ವಾದಿ ದಾವಾ ಸ್ವತ್ತಿನ ಮಾಲೀಕನಾಗಿದ್ದಾನೆ ಎನ್ನುವ ಕುರಿತು ಯಾವುದೇ ವಿವಾದ ಇರುವುದಿಲ್ಲ. ಆದಕಾರಣ ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದಾನೆ ಎಂಬುದು ಕಂಡು ಬರುತ್ತದೆ.

13. ದಾವಾ ಸ್ವತ್ತು ವಾದಿಯು ಹಾಜರುಪಡಿಸಿರುವ ದಾಖಲೆಗಳಂತೆ ವಸತಿ ನಿವೇಶನವಾಗಿರುತ್ತದೆ. ಸದರಿ ಪ್ರತಿವಾದಿಯ ನಿವೇಶನವು ದಾವಾ ನಿವೇಶನದ ಪಕ್ಕದಲ್ಲಿರುವಂತಹ ನಿವೇಶನವಾಗಿರುತ್ತದೆ. ಈ ವಾದಿಯು ಸದರಿ ಪ್ರತಿವಾದಿಯು ತಮ್ಮ ನಿವೇಶನದಲ್ಲಿ ವಾಟರ್ ಸರ್ವೀಸ್ ಸ್ಟೇಷನ್ ಅನ್ನು ನಿರ್ಮಿಸಲು ಪರವಾನಿಗೆಯನ್ನು ನೀಡದಂತೆ ಸಾಗರದ ನಗರಸಭೆಗೆ ದಿನಾಂಕ 22-08-2025 ರಂದು ತಕರಾರು ಅರ್ಜಿಯನ್ನು ಸಹ ನೀಡಿರುತ್ತಾರೆ. ವಾದಿಯು ಹೇಳುವಂತೆ, ದಾವಾ ನಿವೇಶನ ಹಾಗೂ ಪ್ರತಿವಾದಿಯ ನಿವೇಶನವು ವಾಸದ ಉದ್ದೇಶಕ್ಕಾಗಿ ಸ್ಥಾಪಿಸಲ್ಪಟ್ಟ ನಿವೇಶನಗಳಾಗಿರುತ್ತವೆ. ಸದರಿ ಪ್ರತಿವಾದಿಯು ತನ್ನ ನಿವೇಶನದಲ್ಲಿ ಸರ್ವಿಸ್ ಸ್ಟೇಷನ್ ಅನ್ನು ಸ್ಥಾಪಿಸಲು ಹೊರಟಿರುತ್ತಾನೆ ಎಂದು ವಾದಿಯೇ ಸ್ವತಃ ತನ್ನ ವಾದ ಪತ್ರದಲ್ಲಿ ಹೇಳಿದ್ದಾರೆ.

14. ಸದರಿ ಪ್ರತಿವಾದಿಯ ನಿವೇಶನವು ರಾಷ್ಟ್ರೀಯ ಮುಖ್ಯ ರಸ್ತೆಗೆ ಹೊಂದಿಕೊಂಡಿರುವಂತಹ ಸ್ವತ್ತು ಆಗಿರುತ್ತದೆ. ಸದರಿ ಸ್ಥಳದಪಕ್ಕದಲ್ಲಿ ಪ್ರಭು ಪ್ರಸಾದ್ ಎನ್ನುವವರು ಶ್ರೀ ಬೃಂದಾವನ ಸರ್ವೀಸ್ ಸ್ಟೇಷನ್ ಅನ್ನು ಹಲವಾರು ವರ್ಷಗಳ ಹಿಂದಿನಿಂದ ನಡೆಸುತ್ತಿದ್ದಾರೆ ಎಂಬ ಸಂಗತಿಯನ್ನು ವಾದಿಯು ಅಲ್ಲೆಗೆಳೆಯುವುದಿಲ್ಲ. ಸದರಿ ಎರಡು ನಿವೇಶನಗಳು ಹಾಗೂ ಎರಡೂ ಸರ್ವೀಸ್ ಸ್ಟೇಷನ್ ಗಳು ಅಕ್ಕಪಕ್ಕದಲ್ಲಿರುತ್ತವೆ. ಅದೂ ಅಲ್ಲದೇ, ಸದರಿ ಜಾಗದಲ್ಲಿ ಪ್ರತಿವಾದಿಯು ಸರ್ವೀಸ್ ಸ್ಟೇಷನ್ ಅನ್ನು ಸ್ಥಾಪನೆ ಮಾಡದಂತೆ ಸ್ಥಳೀಯ ನಿವಾಸಿಗಳು ಯಾರೂ ಸಹ ತಕರಾರು ಮಾಡಿರುವುದಿಲ್ಲ.

15. ಈ ವಾದಿಯು ತನ್ನ ವಾದಪತ್ರದಲ್ಲಿ ಹಾಗೂ ಮಧ್ಯಂತರ ಅರ್ಜಿಯಲ್ಲಿ ಹೇಳಿರುವ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿದಾಗ, ಇದು ಸಾರ್ವಜನಿಕ ಹಿತಾಸಕ್ತಿಯುಳ್ಳ ದಾವೆಯಂತೆ ಕಂಡು ಬರುತ್ತದೆ. ಈ ಪ್ರತಿವಾದಿಯು ತನ್ನ ಮಧ್ಯಂತರ ಅರ್ಜಿಯೊಂದಿಗೆ ಹಾಜರುಪಡಿಸಿದ ಪ್ರಮಾಣಪತ್ರದ ಕೊನೆಯ ನಾಲ್ಕು ಸಾಲುಗಳಲ್ಲಿ

> **"ಆದ್ದರಿಂದ ನನ್ನ ಮಾಲೀಕತ್ವ ಹಾಗೂ ವಾಸವಿರುವ ಮನೆಯ ಪಕ್ಕದಲ್ಲಿ ವಾಟರ್ ಸರ್ವೀಸ್ ಸ್ಟೇಷನ್ ಅನ್ನು ನಿರ್ಮಾಣ ಮಾಡದಂತೆ ಪ್ರತಿವಾದಿಯ ವಿರುದ್ಧ ಖಾಯಂ ಪ್ರತಿಬಂಧಕಾಜ್ಞೆ ಆದೇಶ ಕೋರಿ ಜಡ್ಜ್ ಮೆಂಟ್ ಮತ್ತು ಡಿಕ್ರಿಗಾಗಿ ಸನ್ನಿಧಿ ನ್ಯಾಯಾಲಯದಲ್ಲಿ ವಾದಿಯು ಪ್ರಾರ್ಥಿಸಿರುತ್ತಾರೆ "** ಎಂದು ಹೇಳಿರುತ್ತಾರೆ.

ಅದೇ ರೀತಿಯಾಗಿ ಸದರಿ ಪ್ರಮಾಣಪತ್ರದ ಮೊದಲನೆ ಪುಟದಲ್ಲಿ

> **"ನಾನು ಸದರಿ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಕೊಳ್ಳಬೇಕು ಎಂದು ತಿರ್ಮಾನಿಸಿದಾಗ ಆಶ್ರಯ ಬಡಾವಣೆಯಲ್ಲಿ ಈ ಪ್ರತಿವಾದಿಯು ವಾಹನಗಳ ತೊಳೆಯುವ ಘಟಕವನ್ನು**

**ಪ್ರಾರಂಭ ಮಾಡಲು ಹೊರಟಿದ್ದು, ಸದರಿ ಪ್ರತಿವಾದಿಯು ಆ ರೀತಿ ಬಾರಿ ಗಾತ್ರದ ವಾಹನಗಳನ್ನು ತಂದು ನಿಲ್ಲಿಸಿ , ವಾಟರ್ ಸರ್ವೀಸ್ ಸ್ಟೇಷನ್ ಅನ್ನು ಪ್ರಾರಂಭ ಮಾಡಿದ್ದಲ್ಲಿ ಆಶ್ರಯ ಬಡಾವಣೆಯಲ್ಲಿ ಇರುವ ಜನರಿಗೆ ತುಂಬಾ ತೊಂದರೆಯಾಗುತ್ತಿದ್ದು, ನನಗೂ ಸಹ ಕಿರಿಕಿರಿ ಉಂಟಾಗಿ ಹೊಸದಾಗಿ ಮನೆಯನ್ನು ಕಟ್ಟಿಕೊಂಡು ಮನೆಯಲ್ಲಿ ನೆಮ್ಮದಿಯಿಂದ ಕಾಲಕಳೆಯುವುದು ಕಷ್ಟಸಾಧ್ಯವಾಗಿದೆ ”** ಎಂದು ಹೇಳಿರುತ್ತಾರೆ.

ಈ ಹೇಳಿಕೆಗಳನ್ನು ಗಮನಿಸಿದಾಗ, ವಾದಿಯು ಸದರಿ ಜಾಗದಲ್ಲಿ ಈಗಾಗಲೇ ಕಟ್ಟಿರುವ ಮನೆಯಲ್ಲಿ ವಾಸವಾಗಿದ್ದಾನೆಯೇ ಅಥವಾ ಹೊಸದಾಗಿ ಮನೆಯನ್ನು ಕಟ್ಟಲು ಉದ್ದೇಶಿಸಿದ್ದಾನೆಯೇ ಎನ್ನುವ ಕುರಿತು ವಾದಿಗೆ ಸ್ವತಃ ಸ್ಪಷ್ಟತೆ ಇಲ್ಲ ಎಂಬುದು ಕಂಡು ಬರುತ್ತದೆ. ವಾದ ಮಂಡನೆ ಕಾಲಕ್ಕೆ ಪ್ರತಿವಾದಿ ಪರ ವಕೀಲರು ಹಾಜರುಪಡಿಸಿರುವ ಫೋಟೋಗಳನ್ನು ಗಮನಿಸಿದಾಗ, ಸದರಿ ವಾದಿಯ ನಿವೇಶನ ಎಂದು ಹೇಳುವ ಜಾಗದಲ್ಲಿ ಹಲವಾರು ಗಿಡಗಂಟಿಗಳು ಬೆಳೆದುಕೊಂಡಿರುವುದು ಕಂಡು ಬರುತ್ತದೆ. ಒಂದು ವೇಳೆ ವಾದಿಯು ಅಲ್ಲಿ ವಾಸದ ಮನೆಯನ್ನು ನಿರ್ಮಿಸಲು ಹೊರಟಿದ್ದಾನೆ ಎಂದಾದರೆ ಅಲ್ಲಿನ ಗಿಡಗಂಟಿಗಳನ್ನು ಸ್ವಚ್ಚ ಗೊಳಿಸುವ ಪ್ರಯತ್ನ ಮಾಡುತ್ತಿದ್ದನು. ಆದರೆ ಅಂತಹ ಯಾವುದೇ ಪ್ರಯತ್ನವನ್ನು ಮಾಡದೇ ಇರುವುದರಿಂದ, ಈ ವಾದಿಯು ಸದರಿ ಜಾಗದಲ್ಲಿ ಮನೆಯನ್ನು ಕಟ್ಟಲು ಹೊರಟಿದ್ದಾನೆ ಅಥವಾ ಮನೆಯನ್ನು ಕಟ್ಟಲು ಉದ್ದೇಶಿಸಿದ್ದಾನೆ ಎನ್ನುವ ಬಗ್ಗೆ ಸಂಶಯ ಉಂಟಾಗುತ್ತದೆ.

16. ಅದೇ ರೀತಿಯಾಗಿ ಸದರಿ ವಾಟರ್ ಸರ್ವೀಸ್ ಸ್ಟೇಷನ್ ನ ಪಕ್ಕದಲ್ಲಿ ಇರುವಂತಹ ಪ್ರಭು ಪ್ರಸಾದ್ ರವರ ಬೃಂದಾವನ ವಾಟರ್ ಸರ್ವೀಸ್ ಸ್ಟೇಷನ್ ಅನ್ನು ನಿಲ್ಲಿಸುವಂತೆ ಕೋರಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಅದೇ ರೀತಿಯಾಗಿ, ಈ ದಾವೆಯನ್ನು ಸಲ್ಲಿಸುವ ಮೊದಲು

ವಾದಿಯು ಸಾಗರದ ನಗರಸಭೆಗೆ ತಕರಾರು ಅರ್ಜಿಯನ್ನು ಸಲ್ಲಿಸಿದ್ದರೂ ಸಹ, ಶಬ್ದಮಾಲಿನ್ಯ ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗಳ ಮುಂದೆ ತನ್ನ ಅಹವಾಲನ್ನು ಮಂಡಿಸಿ ಸೂಕ್ತ ಪರಿಹಾರವನ್ನು ಕಂಡುಕೊಳ್ಳುವ ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ. ಅದೂ ಅಲ್ಲದೇ, ಸದರಿ ಪ್ರತಿವಾದಿಯು ಉದ್ದೇಶಿಸಿರುವ ಸರ್ವೀಸ್ ಸ್ಟೇಷನ್ ನಿಂದ ನಿಗಧಿತ ಮಿತಿಗಿಂತ ಹೆಚ್ಚು ಶಬ್ದ ಮಾಲಿನ್ಯ ಹಾಗೂ ಪರಿಸರ ಮಾಲಿನ್ಯವಾಗುತ್ತದೆ ಎನ್ನುವ ಕುರಿತು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ವರದಿಯನ್ನು ಪಡೆದುಕೊಂಡು ವಾದಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

17. ಈ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿದಾಗ, ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದರೂ ಸಹ, ಪ್ರತಿವಾದಿಯು ತನ್ನ ನಿವೇಶನ ಸಂಖ್ಯೆ-5 ರಲ್ಲಿ ವಾಟರ್ ಸರ್ವೀಸ್ ಸ್ಟೇಷನ್ ಅನ್ನು ಸ್ಥಾಪಿಸುವುದರಿಂದ ಸ್ಥಳೀಯ ನಿವಾಸಿಗಳಿಗೆ ಹಾಗೂ ವಾದಿಗೆ ವಾಯುಮಾಲಿನ್ಯ ಮತ್ತು ಶಬ್ದ ಮಾಲಿನ್ಯ ಉಂಟಾಗುವ ಮೂಲಕ ಉಪದ್ರವವಾಗುತ್ತಿದೆ ಎಂದು ಮೇಲ್ನೋಟಕ್ಕೆ ಸಾಭೀತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದಕಾರಣ, ವಾದಿಯ ಪರವಾಗಿ ಮೇಲ್ನೋಟದ ದಾವೆ ಹಾಗೂ ಅನುಕೂಲತೆಯ ಒಲವು ಇಲ್ಲ ಎಂಬುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಅದೇ ರೀತಿಯಾಗಿ ಒಂದು ವೇಳೆ ಸದರಿ ಪ್ರತಿವಾದಿಯ ವಿರುದ್ಧ ಪ್ರಸ್ತುತ ಮಧ್ಯಂತರ ಅರ್ಜಿ ಸಂಖ್ಯೆ -1 ನ್ನು ಪುರಸ್ಕರಿಸಿ, ಆದೇಶವನ್ನು ನೀಡಿದ್ದೇ ಆದಲ್ಲಿ ಅಪಾರ ಹಣವನ್ನು ವಿನಿಯೋಗಿಸಿ ತಾನು ಸ್ಥಾಪನೆ ಮಾಡಲು ಹೊರಟಿರುವ ಕಾರ್ ವಾಷಿಂಗಿ ಸರ್ವೀಸ್ ಸ್ಟೇಷನ್ ನ ಕಾರ್ಯವು ಸ್ಥಗಿತಗೊಳ್ಳುವುದಲ್ಲದೇ ಅದಕ್ಕೆ ವಿನಿಯೋಗಿಸಿರುವ ಸಾಕಷ್ಟು ಬಂಡವಾಳವು ನಷ್ಟವಾಗುತ್ತದೆ. ಇದರಿಂದ ವಾದಿಗಿಂತ ಹೆಚ್ಚು ನಷ್ಟ ಮತ್ತು ಹಾನಿ ಪ್ರತಿವಾದಿಗೆ ಉಂಟಾಗುತ್ತದೆ. ಅಲ್ಲದೇ ಸದರಿ ನಷ್ಟವನ್ನು ಸರಿದೂಗಿಸಲು ಇತರೇ

ಯಾವುದೇ ರೀತಿಯಿಂದಲೂ ಸಾಧ್ಯವಾಗುವುದಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟು ಮೇಲಿನ ಅಂಶ–1 ರಿಂದ 3 **ನಕಾರಾತ್ಮಕವಾಗಿ** ಉತ್ತರಿಸುತ್ತೇನೆ.

18. **ಅಂಶ–4** : ಅಂಶ 1 ರಿಂದ 3 ರಲ್ಲಿನ ಮೇಲಿನ ಚರ್ಚೆಯಿಂದ ಬಂದಂತಹ ಉತ್ತರದಿಂದ ಈ ಕೆಳಕಂಡಂತೆ,

## ಆದೇಶ

ವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2, ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ–1 ನ್ನು 500/– ರೂಗಳ ವೆಚ್ಚಗಳೊಂದಿಗೆ ತಿರಸ್ಕರಿಸಲಾಗಿದೆ.

*(ಈ ಆದೇಶವನ್ನು ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿಗೆ ಅಳವಡಿಸುವಂತೆ ಉಕ್ತಲೇಖನ ನೀಡಿದ್ದು, ನಂತರ ನಾನು ಅದನ್ನು ಓದಿ ತಪ್ಪುಗಳನ್ನು ತಿದ್ದಿದ, ನಂತರ ಈ ದಿನ ಅಂದರೆ 10 ನೇ ಡಿಸೆಂಬರ್ 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ)*

**(ಮಾದೇಶ ಎಂ.ವಿ.,)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಸಾಗರ.